# ಮನ್ ಕಿ ಬಾತ್

ಸಂಪುಟ 9



# MANN KI BAAT
## VOL.9

**Authors**
Sarda Mohan and Tanushree Banerji

**Illustrations and Cover Art**
Dilip Kadam

**Assistant Artist**
Ravindra Mokate

**Production**
Amar Chitra Katha

**Colourists**
Prakash Sivan and Prajeesh V. P.

**Layout Artist**
Akshay Khadilkar

**Published by**
Amar Chitra Katha Pvt. Ltd

**KANNADA**

ISBN – 978-93-6127-331-5

Amar Chitra Katha Pvt. Ltd, January 2024

© Ministry of Culture, Govt of India, January 2024
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**, a unique learning platform that brings these stories to your school with a range of workshops. Find out more at **www.acklearn.com** or write to us at **acklearn@ack-media.com**.





ನನ್ನ ಪ್ರೀತಿಯ ಮಕ್ಕಳೇ,

ಯುವಕರಾದ ನೀವು ಆಯ್ಕೆ ಮಾಡಿಕೊಳ್ಳುವ ಯಾವುದೇ ಕ್ಷೇತ್ರಗಳಲ್ಲಿ ಮಾಡುತ್ತಿರುವ ಸಾಧನೆಯನ್ನು ನೋಡಿದಾಗ ನನಗೆ ತುಂಬಾ ಸಂತೋಷವಾಗುತ್ತದೆ. ನಿಮ್ಮ ಆಯ್ಕೆ ಶೈಕ್ಷಣಿಕವಾದದ್ದೋ ಅಥವಾ ವೃತ್ತಿಪರವಾದದ್ದೋ ಆಗಿರಬೇಕಾಗಿಲ್ಲ - ನಿಮಗೆ ಏನು ಇಷ್ಟವೋ ಅದನ್ನು ನೀವು ಮಾಡುವಿಕೆ ಮತ್ತು ನಿಮ್ಮ ಕೌಶಲಗಳನ್ನು ಅಭಿವೃದ್ಧಿಪಡಿಸಲು ಶ್ರಮಿಸುವಿಕೆಯು, ನಮ್ಮ ದೇಶದ ಭವಿಷ್ಯದ ಬಗ್ಗೆ ನನಗೆ ಉತ್ತಮ ಭರವಸೆ ನೀಡುತ್ತದೆ.

ಈ ಸಂಪುಟದಲ್ಲಿ ನೀವು ಯುವ ವೇದಾಂಗಿ ಕುಲಕರ್ಣಿಯನ್ನು ಭೇಟಿಯಾಗಲಿದ್ದು, ಇವರಿಗೆ ಸೈಕ್ಲಿಂಗ್ ಎಷ್ಟು ಇಷ್ಟವೆಂದರೆ, ಇವರು ವಿಶ್ವದಾದ್ಯಂತ ಸೈಕಲ್ ಮೂಲಕ ಪ್ರಯಾಣ ಮಾಡಿದ ಅತ್ಯಂತ ಕಿರಿಯ ಮಹಿಳೆಯಾಗಿದ್ದಾರೆ!

ಒಂಬತ್ತು ವರ್ಷದ ಕೃಷ್ಣೀಲ್ ಅನಿಲ್, ರೂಬಿಕ್ಸ್ ಕ್ಯೂಬ್‌ಗೆ ಎಷ್ಟು ಆಕರ್ಷಿತನಾಗಿದ್ದನೆಂದರೆ, ಅವನು ಅದನ್ನು ಕಲೆಯಾಗಿ ಪರಿವರ್ತಿಸಿಕೊಂಡನು. ಸೆರೆಬ್ರಲ್ ಪಾಲ್ಸಿಯೊಂದಿಗೆ ಜನಿಸಿದ ಜಿಗರ್ ಠಕ್ಕರ್ ಪ್ರಶಸ್ತಿ ವಿಜೇತ ವಿಶೇಷಚೇತನ (ಪ್ಯಾರಾ) ಈಜುಗಾರರಾದರು.

ಅಸಾಂಪ್ರದಾಯಿಕ ಆಯ್ಕೆಗಳನ್ನು ಮಾಡುವ ಮೂಲಕ ಸಂತೋಷವನ್ನು ಹರಡುವ ವಯಸ್ಕರೂ ಇದ್ದಾರೆ. ಮೀರಾ ಶೆಣೈರವರು ತಮ್ಮ ಜೀವನವನ್ನು ವಿಶೇಷಚೇತನರ ಸಬಲೀಕರಣಕ್ಕಾಗಿ ಮೀಸಲಾಗಿಟ್ಟಿದ್ದರೆ, ಶ್ರೀಧರ್ ವೆಂಬುರವರು ಗ್ರಾಮೀಣ ಭಾರತದ ಯುವಕರನ್ನು ಸಬಲೀಕರಣಗೊಳಿಸಲು ಮುಡುಪಾಗಿಟ್ಟಿದ್ದಾರೆ.

ನೆನಪಿಡಿ, ನಿಮ್ಮ ಆಯ್ಕೆಗಳು ನಿಮ್ಮ ಜೀವನಕ್ಕೆ ಮೌಲ್ಯವನ್ನು ಸೇರಿಸುತ್ತವೆ. ನಿಮ್ಮ ಮನಸ್ಸಿನ ಮಾತನ್ನು ಕೇಳಿ ಮತ್ತು ಸರಿಯಾದದ್ದನ್ನು ಮಾಡಿ.



# ಪರಿವಿಡಿ


| | | |
|---|---|---|
| 1 | ಬದೌತ್ ಗ್ರಾಮ | 3 |
| 2 | ಚಂದ್ರಕಾಂತ ಕುಲಕರ್ಣಿ | 5 |
| 3 | ಚಿನ್ಮಯ್ ಮತ್ತು ಪ್ರದ್ನ್ಯಾ ಪಾಟಂಕರ್ | 7 |
| 4 | ಹಿರಾಮನ್ ಕೊರ್ವಾ | 10 |
| 5 | ಜಿಗರ್ ಠಕ್ಕರ್ | 13 |
| 6 | ಕೃಷ್ಣೀಲ್ ಅನಿಲ್ | 16 |
| 7 | ಮಧುರೈ ಚಿನ್ನ ಪಿಳ್ಳೈ | 18 |
| 8 | ಮೀರಾ ಶೆಣೈ | 21 |
| 9 | ರಿಂಗ್‌ಫಾಮಿ ಯಂಗ್ | 24 |
| 10 | ಶ್ರೀಧರ್ ವೆಂಬು | 27 |
| 11 | ವೇದಾಂಗಿ ಕುಲಕರ್ಣಿ | 30 |

# ಬದೌತ್ ಗ್ರಾಮ


ಅದು ವಿಜ್ಞಾನದ ಪಿರೀಯಡ್ ಆಗಿತ್ತು. ಮಕ್ಕಳು ಒಳಚರಂಡಿ ವಿಲೇವಾರಿ ಬಗ್ಗೆ ತಿಳಿದುಕೊಳ್ಳುತ್ತಿದ್ದರು.
ಕೊಳಚೆ ನೀರನ್ನು ಸರಿಯಾಗಿ ವಿಲೇವಾರಿ ಮಾಡದೇ ಇದ್ದರೆ ಅದು ರೋಗಗಳ ಹರಡುವಿಕೆಗೆ ಕಾರಣವಾಗಬಹುದು.
ಕಳೆದ ತಿಂಗಳು ನಮ್ಮ ಕಟ್ಟಡದ ಬಳಿ ಕೊಳಚೆ ನೀರಿನ ಪೈಪುಗಳು ಒಡೆದಿದ್ದವು. ಯಪ್ಪಾ ದುರ್ವಾಸನೆ ಬೀರುತ್ತಿತ್ತು!
ಆ ವಾಸನೆಯನ್ನು ನೀನು ಹೇಗೆ ಸಹಿಸಿಕೊಂಡೆ?
ವಿರಾಮ ತೆಗೆದುಕೊಂಡು ಮನ್ ಕಿ ಬಾತ್ ಕಥೆಯನ್ನು ಕೇಳಲು ಯಾರೆಲ್ಲಾ ಬಯಸುವಿರಿ?
ವಾಹ್!
ನಾನು!
ಹರಿಯಾಣದ ಪಂಚಕುಲದ ಬದೌತ್ ಗ್ರಾಮದಲ್ಲಿ -
ಉಫ್! ಆ ತುಂಬಿ ಹರಿಯುವ ಗಟಾರದಿಂದ ಕೊಳಚೆಯ ದುರ್ವಾಸನೆ ಬರುತ್ತಿದೆ.
ನನ್ನ ಮಕ್ಕಳು ಅನಾರೋಗ್ಯಕ್ಕೆ ಒಳಗಾಗುತ್ತಲೇ ಇರುತ್ತಾರೆ. ಸುತ್ತಲೂ ಕೊಳಕು ನೀರು ಇರುವುದರಿಂದ ಹೀಗಾಗುತ್ತಿದೆ ಎಂದು ನನಗೆ ಖಂಡಿತಾ ಗೊತ್ತಿದೆ.
ಗ್ರಾಮವು ಕೆಲವು ಸಮಯದಿಂದ ಕೊಳಕು ನೀರಿನ ಚರಂಡಿ ಸಮಸ್ಯೆಯನ್ನು ಎದುರಿಸುತ್ತಿದೆ.
ನಾನು ತರಕಾರಿಗಳನ್ನು ಇಲ್ಲಿಂದ ಖಂಡಿತಾ ಖರೀದಿಸುವುದಿಲ್ಲ. ಇವು ತುಂಬಾ ಕೊಳಕಾಗಿವೆ!
ಆದರೆ ಇಡೀ ಗ್ರಾಮವೇ ಹೀಗೆ. ನಾವು ಏನು ಮಾಡಬಹುದು?


ಗ್ರಾಮ ಪಂಚಾಯತಿ ಈ ಸಮಸ್ಯೆಗೆ ಪ್ರಮುಖ ಆದ್ಯತೆ ನೀಡಿತ್ತು*.
ಸರಪಂಚರೇ, ಹಳ್ಳಿಯ ಸುತ್ತಲೂ ತುಂಬಾ ರೋಗ ಹರಡುತ್ತಿದೆ. ಕೊಳಚೆ ನೀರಿನ ವಿಲೇವಾರಿಗೆ ನಾವು ಒಂದು ಸೂಕ್ತವಾದ ವ್ಯವಸ್ಥೆ ಮಾಡಬೇಕಿದೆ.
ನಾನು ಒಪ್ಪುತ್ತೇನೆ. ನಾವು ಹಣಕ್ಕಾಗಿ ಅಥವಾ ಇನ್ನಾವುದೋ ಸಹಾಯಕ್ಕಾಗಿ ಕಾಯುವುದು ಬೇಡ. ಇಂತಹ ವಿಷಯಗಳಲ್ಲಿ ನಾವೇ ನಿರ್ಧಾರ ತೆಗೆದುಕೊಳ್ಳಬೇಕು.
ಹಲವು ಸಭೆಗಳ ನಂತರ, ಪರಿಹಾರವೊಂದು ನಿಧಾನವಾಗಿ ಹೊರಹೊಮ್ಮಲು ಪ್ರಾರಂಭಿಸಿತು.
ಪೈಪುಗಳನ್ನು ಬಳಸಿ ನಾವು ಕೊಳಚೆ ನೀರನ್ನೆಲ್ಲಾ ಒಂದೇ ಸ್ಥಳದಲ್ಲಿ ಸಂಗ್ರಹಿಸಿದರೆ ಅದನ್ನು ವಿಲೇವಾರಿ ಮಾಡುವುದು ಸುಲಭವಾಗುತ್ತದೆ.
ಹೌದು, ನಾವು ಕೊಳಚೆ ನೀರನ್ನು ಹಳ್ಳಿಯಿಂದ ಹೊರಗೆ, ಮನೆಗಳಿಂದ ದೂರದಲ್ಲಿ ಸಂಗ್ರಹಿಸಬಹುದು.
ಈ ನೀರನ್ನು ಸಹ ಏಕೆ ಫಿಲ್ಟರ್ ಮಾಡಬಾರದು? ನಂತರ ನಾವು ಅದನ್ನು ಕೃಷಿ ಉದ್ದೇಶಗಳಿಗಾಗಿ ಬಳಸಬಹುದು.
ಇದು ಅತ್ಯುತ್ತಮ ಐಡಿಯಾ!
ಗ್ರಾಮಸ್ಥರ ಬೆಂಬಲದೊಂದಿಗೆ ಪಂಚಾಯತಿಯು ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಿತು.
ಸ್ವಲ್ಪ ಸಮಯದಲ್ಲೇ -
ಹಳ್ಳಿಯು ಪುನಃ ಎಷ್ಟು ಸ್ವಚ್ಛವಾಗಿ ಕಾಣುತ್ತಿದೆ ಎಂದು ನೋಡಿ!
ಹೌದು, ಈ ಸಮಸ್ಯೆಯನ್ನು ಗ್ರಾಮ ಪಂಚಾಯತ್ ಹೇಗೆ ಪರಿಹರಿಸಿತು ಮತ್ತು ಎಲ್ಲರೂ ಅವರನ್ನು ಬೆಂಬಲಿಸಲು ಹೇಗೆ ಒಟ್ಟಿಗೆ ಬಂದರು ಎಂಬುದರ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ!
ಬದೌತ್‌ನ ಜನರು ಪ್ರಧಾನಿ ಮೋದಿಯವರ ರೇಡಿಯೊ ಶೋ, ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಶ್ಲಾಘನೆಗೊಳಪಟ್ಟರು.

*ಗ್ರಾಮ ಸಭೆ

# ಚಂದ್ರಕಾಂತ ಕುಲಕರ್ಣಿ




*ಇಸ್ಲಾಂ ಧರ್ಮದ ಅನುಯಾಯಿಗಳು ನೀಡುವ ಒಂದು ರೀತಿಯ ದಾನ


ಒಂದು ದಿನ-
ನನಗೆ ಪ್ರತಿ ತಿಂಗಳು ತುಂಬಾ ಹಣ ಬೇಕಾಗಿಲ್ಲ. ನಾನು ಅದರಲ್ಲಿ ಸ್ವಲ್ಪ ಹಣವನ್ನು ಒಳ್ಳೆಯ ಕಾರಣಕ್ಕಾಗಿ ದಾನ ಮಾಡಬೇಕು.
ಅವರು ತಮ್ಮ ಪಿಂಚಣಿಯ ಒಂದು ಭಾಗವನ್ನು ಸರ್ಕಾರದ ರಾಷ್ಟ್ರವ್ಯಾಪಿ ಸ್ವಚ್ಛತಾ ಕಾರ್ಯಕ್ರಮವಾದ ಸ್ವಚ್ಛ ಭಾರತ್ ಅಭಿಯಾನಕ್ಕೆ* ದಾನ ಮಾಡಲು ಪ್ರಾರಂಭಿಸಿದರು.
ನಾನು ಕೆಲವು ಪೋಸ್ಟ್-ಡೇಟೆಡ್ ಚೆಕ್ಕುಗಳನ್ನು ಬರೆದಿಡುತ್ತೇನೆ, ಇದರಿಂದ ನಾನು ನಿಯಮಿತವಾಗಿ ದಾನ ಮಾಡಬಹುದು.
ಚಂದ್ರಕಾಂತ್ ರವರು ತಮ್ಮ ದೇಣಿಗೆಗಳ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿದ್ದರು.
ಈ ಮಹಾನ್ ಕೊಡುಗೆಗಾಗಿ ಅವರಿಗೆ ಧನ್ಯವಾದ ಹೇಳಲು, ಪ್ರಧಾನಿ ಮೋದಿ ರವರು ಪುಣೆಗೆ ಭೇಟಿ ನೀಡಿದಾಗ ಚಂದ್ರಕಾಂತ್ ಮತ್ತು ಅವರ ಕುಟುಂಬದವರನ್ನು ಭೇಟಿಯಾದರು.
ಸರ್, ಅಭಿಯಾನಕ್ಕಾಗಿ ಈ 52 ಚೆಕ್ಕುಗಳನ್ನು ನೀಡುತ್ತಿದ್ದೇನೆ. ಇದು ನನ್ನ ರಾಷ್ಟ್ರಕ್ಕಾಗಿ ನಾನು ಮಾಡಬಹುದಾದ ಒಂದು ಅಳಿಲು ಸೇವೆ.
ನೀವು ನಿಜವಾದ ಹೀರೋ, ಚಂದ್ರಕಾಂತ್ ಜೀ.
ಈ ಉದ್ದೇಶಕ್ಕಾಗಿ ಚಂದ್ರಕಾಂತ್ ರವರು 2,60,000 ರೂ.ಗಳನ್ನು ದಾನ ಮಾಡಿದ್ದಾರೆ.
ಪ್ರಧಾನ ಮಂತ್ರಿಯ ರೇಡಿಯೋ ಶೋ, ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಚಂದ್ರಕಾಂತ್ ಅವರ ಕೊಡುಗೆಯನ್ನು ಸಹ ಉಲ್ಲೇಖಿಸಲಾಗಿದೆ.
ನಮಗೆ ಚಂದ್ರಕಾಂತ್ ಕುಲಕರ್ಣಿಯವರಿಗಿಂತ ಬೇರೊಬ್ಬರು ಸ್ಫೂರ್ತಿಯಾಗಲಾರರು. ಇಂತಹವರು ನಮ್ಮ ನಿಜವಾದ ಶಕ್ತಿ.

*ಸ್ವಚ್ಛ ಭಾರತ ಮಿಷನ್

# ಚಿನ್ಮಯ್ ಮತ್ತು ಪ್ರದ್ನ್ಯಾ ಪಾಟಂಕರ್




ಅವರು 2009 ರಲ್ಲಿ ನ್ಯೂಜೆರ್ಸಿಗೆ* ಹೋದಾಗ, ಸ್ವಲ್ಪ ಸಮಯದವರೆಗೆ ಮಲ್ಲಕಂಬದೊಂದಿಗೆ ಅವರು ಸಂಪರ್ಕ ಕಳೆದುಕೊಂಡಿದ್ದರು. ಆದರೆ ಸ್ವಲ್ಪ ಸಮಯದಲ್ಲೇ ಅದು ಬದಲಾಯಿತು.
ಈಗ ನಮ್ಮ ಮನೆಯ ಹಿಂಭಾಗದಲ್ಲಿ ಕಂಬವನ್ನು ಅಳವಡಿಸಲು ಸ್ಥಳವಿರುವುದರಿಂದ, ನಾವು ಅಭ್ಯಾಸ ಮಾಡಬಹುದು.
ನಾನು ಮಲ್ಲಕಂಬದ ಅಭ್ಯಾಸವನ್ನು ಮರಳಿ ಮಾಡಲು ಇನ್ನೂ ಕಾಯಲು ಸಾಧ್ಯವಿಲ್ಲ!


ಆರಂಭದಲ್ಲಿ, ಒಂದೇ ಹವ್ಯಾಸವನ್ನು ಎಂಜಾಯ್ ಮಾಡುವ ಕೆಲವು ಸ್ನೇಹಿತರೊಂದಿಗೆ ಆರಂಭವಾಯಿತು. ಆದರೆ ಕ್ರಮೇಣ ಹೀಗೊಂದು ಪದ ಹರಡಿತು...
ಕಂಬದ ಮೇಲೆ ಯೋಗ!
ಅಮ್ಮಾ, ನಾನು ಅದನ್ನು ಹೇಗೆ ಮಾಡುವುದೆಂದು ಕಲಿಯಲು ಬಯಸುತ್ತೇನೆ!
...ಜನರು ಕುತೂಹಲ ತೋರಿಸಲು ಪ್ರಾರಂಭಿಸಿದರು


ಚಿನ್ಮಯ್ ಮತ್ತು ಪ್ರದ್ನ್ಯಾ, ಅವರಿಗೆ ತರಬೇತಿ ನೀಡಲು ಪ್ರಾರಂಭಿಸಿದರು.
ಮಲ್ಲಕಂಬದಲ್ಲಿ ಮೂರು ವಿಧಗಳಿವೆ. ಇಂದು, ನಾವು ಹಗ್ಗದ ಮಲ್ಲಕಂಬವನ್ನು ಕಲಿಯಲಿದ್ದೇವೆ.
ನಾನು ಮಾಡುವುದನ್ನು ಗಮನವಿಟ್ಟು ನೋಡಿ.


ಕಲಿಯಲು ಬರುತ್ತಿದ್ದವರು ಹೆಚ್ಚಾದಂತೆ, ಚಿನ್ಮಯ್ ಅಧಿಕೃತವಾದ ತರಬೇತಿ ಕೇಂದ್ರವೊಂದನ್ನು ಸ್ಥಾಪಿಸಲು ಬಯಸಿದ್ದರು. ಆದರೆ-
ನನ್ನ ವೀಸಾ, ವ್ಯಾವಹಾರವನ್ನು ಪ್ರಾರಂಭಿಸಲು ನನಗೆ ಅನುಮತಿಸುವುದಿಲ್ಲ.
ನಾವು ಇದನ್ನು ಲಾಭರಹಿತ ವ್ಯವಹಾರವಾಗಿ ಆರಂಭಿಸಬಹುದು. ನಮ್ಮ ಸ್ನೇಹಿತರು ಸಹ ಸಹಾಯ ಮಾಡಬಹುದು.
ಹೀಗಾಗಿ, 2015 ರಲ್ಲಿ, ಮಲ್ಲಕಂಬ ಫೆಡರೇಶನ್ ಯು.ಎಸ್.ಎ (ಎಂ.ಎಫ್.ಯು) ಯನ್ನು ಸ್ಥಾಪಿಸಲಾಯಿತು.

*ಯು.ಎಸ್.ಎ.ಯ ಒಂದು ರಾಜ್ಯ




*ಅಂತರರಾಷ್ಟ್ರೀಯ ಯೋಗ ದಿನ

# ಹಿರಾಮನ್ ಕೊರ್ವಾ



ಎಲ್ಲಾ ಮಕ್ಕಳು ಆ ದಿನದ ಮನ್ ಕಿ ಬಾತ್ ಕಥೆ ಕೇಳಲು ಸಿದ್ಧರಾಗಿದ್ದರು.
ಸರ್, ನಾವು ಈಗಷ್ಟೇ ನಮ್ಮ ಸಂಸ್ಕೃತ ಪರೀಕ್ಷೆಯನ್ನು ಮುಗಿಸಿದ್ದೇವೆ. ಈಗ ನಾನು ವಿಶ್ರಾಂತಿ ಪಡೆಯಲು ಒಳ್ಳೆಯ ಕಥೆ ಕೇಳಬೇಕು.
ಅದು ನಿಜ! ಈ ದಿನಗಳಲ್ಲಿ ಸಂಸ್ಕೃತವನ್ನು ಯಾರೂ ಮಾತನಾಡುವುದಿಲ್ಲ. ನಾವು ಅದನ್ನು ಏಕೆ ಕಲಿಯಬೇಕು?
ಅದನ್ನು ಮಾತನಾಡುವ ಜನರಿದ್ದಾರೆ. ಅದಲ್ಲದೆ, ಆ ಭಾಷೆಯನ್ನು ತಿಳಿದುಕೊಳ್ಳದೆ, ನಾವು ನಮ್ಮ ಪ್ರಾಚೀನ ಗ್ರಂಥಗಳನ್ನು ಹೇಗೆ ಓದಲು ಸಾಧ್ಯವಾಗುತ್ತದೆ?
'ರಾಮಾಯಣ' ಮತ್ತು 'ಮಹಾಭಾರತ'ದಂತಹ ಕೃತಿಗಳೇ?
ಅದು ಸರಿ. ಭಾರತದಲ್ಲಿ ಹಲವಾರು ಭಾಷೆಗಳನ್ನು ಯಾರೂ ಬಳಸದೆ ಇರುವ ಕಾರಣ ಅವು ಕಣ್ಮರೆಯಾಗುವ ಅಪಾಯದಲ್ಲಿವೆ. ಈ ಆಲೋಚನೆಯು ಜಾರ್ಖಂಡ್‌ನ ಸಿಂಜು ಗ್ರಾಮದ ಹಿರಾಮನ್ ಕೊರ್ವಾ ರವರಿಗು ಸಹ ಬಂದಿದೆ.
ಹಿರಾಮನ್ ಚಿಕ್ಕ ಹುಡುಗನಾಗಿದ್ದಾಗ, ಅವನ ಬುಡಕಟ್ಟಿನ ಭಾಷೆ ಅವನನ್ನು ಆಕರ್ಷಿಸಲು ಪ್ರಾರಂಭಿಸಿತು.
ಅಜ್ಜಿ ಮಾತನಾಡುತ್ತಿರುವಾಗ, ಅವಳ ಮಾತಿನಲ್ಲಿ ತುಂಬಾ ಅಭಿವ್ಯಕ್ತಿ ಇದೆ.
ಅದೇ ಭಾಷೆಯ ಶಕ್ತಿ.




*ಜಾರ್ಖಂಡ್‌ನ ಒಂದು ಪಟ್ಟಣ


ಗೋವಿಂದ್ ಪ್ರೌಢಶಾಲೆಯ ಪ್ರಾಂಶುಪಾಲರು ಹಿರಾಮನ್‌ಗೆ ಮುಂದೆ ಓದುವಂತೆ ಪ್ರೋತ್ಸಾಹ ನೀಡಿದರು. ಈ ಮಧ್ಯೆ, ಕೊರ್ವಾ ಪದಗಳೊಂದಿಗೆ ಡೈರಿಗಳ ಸಂಖ್ಯೆಯು ಬೆಳೆಯುತ್ತಲೇ ಇತ್ತು.
ಇದು ನನ್ನ ಆರನೇ ಡೈರಿ.
ಹಿರಾಮನ್ 12 ವರ್ಷಗಳ ಕಾಲ, ತಮ್ಮ ಮಾತೃಭಾಷೆಯ ಪದಗಳನ್ನು ಸಂಗ್ರಹಿಸಿದರು...
...ಆದರೆ ಅದನ್ನು ನಿಘಂಟಾಗಿ ಪ್ರಕಟಿಸಲು ಹಣವಿರಲಿಲ್ಲ. ಅವರು ಸಹಾಯಕ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರೂ, ಹಣಕಾಸಿನ ನೆರವಿಗಾಗಿ ಹುಡುಕಬೇಕಾಗಿತ್ತು. ಅಂತಿಮವಾಗಿ -
ನಮ್ಮ ಸಂಘವು ಕೊರ್ವಾ ನಿಘಂಟಿಗೆ ಹಣಕಾಸು ನೆರವು ನೀಡಲು ನಿರ್ಧರಿಸಿದೆ.
ಧನ್ಯವಾದಗಳು ಸರ್.
ಕೊನೆಗೆ ಜಾರ್ಖಂಡ್‌ನ ಪಲಮು ಎಂಬ ಸ್ಥಳದಲ್ಲಿರುವ ಬಹು-ಕಲಾ ಸಂಘವು ಅವರ ಸಹಾಯಕ್ಕೆ ಬಂದಿತು.
ನನ್ನ ಬುಡಕಟ್ಟಿನ ಹಲವಾರು ಜನರೊಂದಿಗೆ ಮಾತನಾಡಿದ್ದರ ಫಲಿತಾಂಶವೇ ಈ 50-ಪುಟಗಳ ನಿಘಂಟು. ಇದು ಪ್ರಾಣಿಗಳು, ಪಕ್ಷಿಗಳು, ಬಣ್ಣಗಳು, ಬಟ್ಟೆಬರೆ, ಗೃಹೋಪಯೋಗಿ ವಸ್ತುಗಳು ಮತ್ತು ನಮ್ಮ ದಿನನಿತ್ಯದ ಜೀವನದಲ್ಲಿ ಬಳಸುವ ಎಲ್ಲ ವಸ್ತುಗಳ ಹೆಸರುಗಳನ್ನು ಹೊಂದಿದೆ.
कोरवा भाषा शब्दकोष
ಒಂದು ಸಮುದಾಯವನ್ನು ಅದರ ಭಾಷೆ ಮತ್ತು ಸಂಸ್ಕೃತಿಯಿಂದ ಗುರುತಿಸಲಾಗುತ್ತದೆ. ಅದನ್ನು ಮರೆತುಬಿಡುವ ಮೂಲಕ, ನಾವು ನಮ್ಮ ಅಸ್ಮಿತೆಯನ್ನು ಮರೆತುಬಿಡುತ್ತೇವೆ.
कोरवा भाषा शब्दकोष

# ಜಿಗರ್ ಠಕ್ಕರ್



ಚರಣ್, ಏನು ವಿಷಯ?
ಸರ್, ನಾನು ಸ್ಥಳೀಯ ಬಾಸ್ಕೆಟ್‌ಬಾಲ್ ತಂಡದಲ್ಲಿ ಸ್ಥಾನ ಗಳಿಸಲು ಪ್ರಯತ್ನಿಸಿದೆನು. ಆದರೆ ನನ್ನ ಎತ್ತರ ಕಡಿಮೆ ಎಂದು ಅವರು ನನ್ನನ್ನು ಸೇರಿಸಿಕೊಳ್ಳಲಿಲ್ಲ.
ಬೇಸರ ಮಾಡಿಕೊಳ್ಳಬೇಡ ಚರಣ್. ನಿನ್ನನ್ನು ಸೇರಿಸಿಕೊಳ್ಳದೆ ಅವರು ತಪ್ಪು ಮಾಡಿದರೆಂಬುದನ್ನು ನೀನು ಸಾಬೀತುಪಡಿಸು. ಜಿಗರ್ ಠಕ್ಕರ್ ಎಂಬ ಯುವಕನ ಬಗ್ಗೆ ನಾನು ನಿನಗೆ ಹೇಳುತ್ತೇನೆ. ಆತ ಅನೇಕ ತೊಡಕುಗಳ ವಿರುದ್ಧ ಸೆಣೆಸಿ, ಪ್ರಶಸ್ತಿ ವಿಜೇತ ಈಜುಗಾರನಾದನು.
ಜಿಗರ್ ಠಕ್ಕರ್ ಜೂನ್ 1998 ರಲ್ಲಿ ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಜನಿಸಿದನು. ಕೆಲವೇ ತಿಂಗಳುಗಳಲ್ಲಿ, ಅವನ ಹೆತ್ತವರ ಸಂತೋಷವು ಕಾಳಜಿಗೆ ತಿರುಗಿತು.
ಇವನ ಕಾಲುಗಳು ಬಲ ಕಳೆದುಕೊಂಡಿವೆ. ಬಲವಿಲ್ಲದೆ ಕೆಳಗೆ ಬೀಳುತ್ತಲೇ ಇರುತ್ತವೆ.
ಅವನಿಗೆ ಒಂಬತ್ತು ತಿಂಗಳಾಗುವಷ್ಟರಲ್ಲಿ -
ಕ್ಷಮಿಸಿ, ಜಿಗರ್‌ಗೆ ಸೆರೆಬ್ರಲ್ ಪಾಲ್ಸಿ ಎಂಬ ಅಸ್ವಸ್ಥತೆ ಇದೆ ಎಂದು ಹೇಳಲು ನನಗೆ ಬೇಸರವಾಗುತ್ತಿದೆ.
ಸೆರೆಬ್ರಲ್ ಪಾಲ್ಸಿ ಎಂದರೇನು?
ಇದರರ್ಥ, ಇವನ ಮೆದುಳಿಗೆ ಅವನ ದೇಹವನ್ನು ಸರಿಯಾಗಿ ನಿಯಂತ್ರಿಸಲು ಸಾಧ್ಯವಾಗದಿರುವಿಕೆ. ಎಲ್ಲಡೆ ನಡೆಯುವುದು ಮತ್ತು ಚಲಿಸುವುದು ಇವನಿಗೆ ಒಂದು ಸಮಸ್ಯೆಯಾಗಲಿದೆ. ಇವನ ದೇಹದ ಸಮತೋಲನದ ಮೇಲೂ ಅದು ಪರಿಣಾಮ ಬೀರುತ್ತದೆ.
ಹಾಗಾದರೆ ಇವನು ಎಂದಿಗೂ ಸ್ವತಂತ್ರನಾಗಿ ಇರಲಾಗುವುದಿಲ್ಲವೇ?
ಸರಿಯಾಗುತ್ತಾನೆ. ನಾವು ಅದನ್ನು ಖಾತ್ರಿಪಡಿಸುತ್ತೇವೆ.
ಜಿಗರ್‌ನ ಹೆತ್ತವರು ಬೇಸರ ಮಾಡಿಕೊಳ್ಳುವ ಬದಲು ಅವನನ್ನು ಫಿಸಿಯೋಥೆರಪಿಸ್ಟ್ ಬಳಿಗೆ ಕರೆದುಕೊಂಡು ಹೋಗಿ ವ್ಯಾಯಾಮ ಮಾಡಿಸಲು ಪ್ರಾರಂಭಿಸಿದರು.


ಜಿಗರ್ ಎಂಟು ವರ್ಷ ವಯಸ್ಸಿನವನಾಗಿದ್ದಾಗ -
ಇವನು ತುಂಬಾ ಚುರುಕಾಗಿದ್ದಾನೆ ಆದರೆ ಇವನು ಇಷ್ಟಪಡುವ ಯಾವುದಾದರು ಕ್ರೀಡೆಯನ್ನು ಆಯ್ಕೆ ಮಾಡಿಕೊಂಡರೆ ಅದು ಸಹಾಯ ಮಾಡುತ್ತದೆ. ಅದು ಇವನ ಸ್ನಾಯುಗಳನ್ನು ಬಲಪಡಿಸುತ್ತದೆ.
ಅವರು ಕೆಲವು ಕ್ರೀಡೆಗಳಿಗೆ ಸೇರಿಸಲು ಪ್ರಯತ್ನಿಸಿದರು ಆದರೆ ಏನೂ ಪ್ರಯೋಜನವಾಗಲಿಲ್ಲ.
ನಂತರ, ಫಿಸಿಯೋಥೆರಪಿಸ್ಟ್ ಈಜಲು ಸಲಹೆ ನೀಡಿದರು.
ಬೇಡ. ಈಜುಕೊಳದಲ್ಲಿ ಅವನನ್ನು ರಕ್ಷಿಸಲು ನಮಗೆ ಸಾಧ್ಯವಾಗುವುದಿಲ್ಲ. ಅವನು ಮುಳುಗಬಹುದು!
ನಾನು ಮೊದಲು ಈಜಲು ಕಲಿತರೆ, ನಾನು ಎಲ್ಲಾ ಸಮಯದಲ್ಲೂ ನೀರಿನಲ್ಲಿ ಅವನೊಂದಿಗೆ ಇರಬಹುದು.
ಜಿಗರ್‌ನ ತಾಯಿ ಈಜುವುದನ್ನು ಕಲಿತರು ಮತ್ತು ಸ್ವಲ್ಪವೇ ಸಮಯದಲ್ಲಿ, ಜಿಗರ್ ಕೂಡ ನೀರಿಗೆ ಇಳಿದನು!
ಹೀ ಹೀ!
ಇವನು ಇಷ್ಟಪಡುತ್ತಿದ್ದಾನೆ!
ಸ್ಪ್ಲಾಶ್
ಸ್ಪ್ಲಾಶ್
ಮುಂದಿನ ವರ್ಷ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ ಜಿಗರ್ ತನ್ನ ಶಾಲೆಯನ್ನು ಪ್ರತಿನಿಧಿಸಿದನು.
ಕುಳಿತಿರುವ ಹುಡುಗ ತನ್ನ ದೇಹದ ಶೇ.80 ಕ್ಕಿಂತ ಹೆಚ್ಚು ಭಾಗದ ಮೇಲೆ ನಿಯಂತ್ರಣ ಹೊಂದಿಲ್ಲ ಎಂದರೆ ನೀವು ನಂಬಬಹುದೇ? ಇವನು ಸಮರ್ಥರಾಗಿರುವ ಮಕ್ಕಳ ವಿರುದ್ಧ ಸ್ಪರ್ಧಿಸುತ್ತಿದ್ದಾನೆ.
ಜಿಗರ್ 14 ವರ್ಷ ವಯಸ್ಸಿನವನಾಗುವಷ್ಟರಲ್ಲಿ, ತುಂಬಾ ಪ್ರೇರಣೆ ಮತ್ತು ಮಹತ್ವಾಕಾಂಕ್ಷೆಯನ್ನು ಬೆಳೆಸಿಕೊಂಡಿದ್ದನು.
ನಾನು ರಾಷ್ಟ್ರೀಯ ಪ್ಯಾರಾ ಈಜು ಸ್ಪರ್ಧೆಯಲ್ಲಿ ಭಾಗವಹಿಸಲು ಬಯಸುತ್ತೇನೆ. ಅದರ ಬಗ್ಗೆ ನಾನು ಇಂಟರ್ನೆಟ್‌ನಲ್ಲಿ ಸಂಶೋಧನೆ ಮಾಡಿದ್ದೇನೆ ಮತ್ತು ಜಿಮ್‌ಗೆ ಹೋಗುವುದು ನನಗೆ ತಯಾರಾಗಲು ಸಹಾಯ ಮಾಡುತ್ತದೆ.
ಸ್ವಲ್ಪ ದಿನಗಳಲ್ಲೇ, ಜಿಗರ್ ತನ್ನ ದಿನಚರಿಯನ್ನು ಸಿದ್ಧಪಡಿಸಿಕೊಂಡನು. ಅವನು ಬೆಳಿಗ್ಗೆ ಈಜಲು, ನಂತರ ಶಾಲೆಗೆ, ನಂತರ ಜಿಮ್‌ನಲ್ಲಿ ತರಬೇತಿ ಮತ್ತು ನಂತರ ಪುನಃ ಈಜು ಅಭ್ಯಾಸಕ್ಕೆ ಹೋಗುತ್ತಿದ್ದನು.




*ಜರ್ಮನಿ ರಾಷ್ಟ್ರ ಆಯೋಜಿಸಿದ್ದ ಇಂಟರ್‌ನ್ಯಾಶನಲೆ ಡ್ಯೂಶೆ ಮೀಸರ್‌ಶಾಫ್ಟನ್, ಪಾರಾ ಈಜು ವಿಶ್ವ ಚಾಂಪಿಯನ್‌ಶಿಪ್.

# ಕೃಷ್ಣೀಲ್ ಅನಿಲ್




*ಮಲಯಾಳಂ ಭಾಷೆಯಲ್ಲಿ ತಾಯಿ
^ಮಲಯಾಳಂ ಭಾಷೆಯಲ್ಲಿ ತಂದೆ


ದೇಶಗಳ ಧ್ವಜಗಳಂತಹ ಸರಳ ಮಾದರಿಗಳೊಂದಿಗೆ ಪ್ರಾರಂಭಿಸಿ...
...ಸ್ವಲ್ಪವೇ ದಿನಗಳಲ್ಲಿ ಕೃಷ್ಣೀಲ್ ಪೂರ್ಣ ಪ್ರಮಾಣದ ಮೊಸಾಯಿಕ್ ಪೋಟ್ರೇಟುಗಳನ್ನು ತಯಾರಿಸಲು ಆರಂಭಿಸಿದನು.
ಅವನು ತನ್ನ ಸ್ನೇಹಿತರು, ಶಿಕ್ಷಕರು ಮತ್ತು ಕ್ರೀಡಾಪಟುಗಳು ಮತ್ತು ಚಲನಚಿತ್ರ ತಾರೆಯರ ಭಾವಚಿತ್ರಗಳನ್ನು ಮಾಡಿದ್ದಾನೆ.
ಈ ಕೆಲವು ವ್ಯಕ್ತಿಗಳು, ಅವನು ಮಾಡಿದ ಭಾವಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಮರುಹಂಚಿಕೊಂಡರು, ಇದರಿಂದ ಅವನಿಗೆ ಮನ್ನಣೆ ಸಿಕ್ಕಿತು.
ಕೃಷ್ಣೀಲ್, ರಾಹುಲ್ ಗಾಂಧಿ ಮತ್ತು ಪ್ರಧಾನಿ ಮೋದಿಯವರ ಮೊಸಾಯಿಕ್ ಭಾವಚಿತ್ರಗಳನ್ನು ಸಹ ಮಾಡಿದ್ದಾನೆ. ರಾಹುಲ್ ಗಾಂಧಿ, ಇವನನ್ನು ಭೇಟಿಯಾದರು ಮತ್ತು ಪ್ರಧಾನಿ ಮೋದಿ ರವರು ಮನ್ ಕಿ ಬಾತ್‌ನಲ್ಲಿ ಅವನ ಬಗ್ಗೆ ಪ್ರಸ್ತಾಪಿಸಿದರು.
3X3 ರೂಬಿಕ್ಸ್ ಕ್ಯೂಬ್ ಅನ್ನು ಕರಗತ ಮಾಡಿಕೊಂಡ ನಂತರ, ಅವನು ಎಲ್ಲಾ ಆಕಾರಗಳು ಮತ್ತು ಗಾತ್ರಗಳ ಕ್ಯೂಬ್‌ಗಳನ್ನು ಬಿಡಿಸಲು ಕಲಿತನು.
ಅವನ ಯುಟ್ಯೂಬ್ ಚಾನೆಲ್ ಆದ 'ಕೃಷ್ಣೀಲ್ ಅನಿಲ್', ಸುಮಾರು 200 ವೀಡಿಯೊಗಳನ್ನು ಹೊಂದಿದೆ. ಇದು ಅವನ ಮಾಡಿದ ಮೊಸಾಯಿಕ್ ಪೋಟ್ರೇಟುಗಳ ಟೈಮ್-ಲ್ಯಾಪ್ಸ್ ಫೂಟೇಜ್, ವಿಭಿನ್ನ ಕ್ಯೂಬ್‌ಗಳ ವೀಡಿಯೊ ವಿಮರ್ಶೆಗಳು ಮತ್ತು ರೂಬಿಕ್ಸ್ ಕ್ಯೂಬನ್ನು ಬಿಡಿಸಲು ಇತರರಿಗೆ ಸಹಾಯ ಮಾಡುವ ಟ್ಯುಟೋರಿಯಲ್‌ಗಳನ್ನು ಒಳಗೊಂಡಿದೆ.
ಮೊದಲು, ನೀವು ಒಂದು ಬದಿಯಲ್ಲಿ ಕ್ರಾಸ್ ಮಾಡಬೇಕಾಗಿದೆ.
ಕೃಷ್ಣೀಲ್‌ಗೆ, ಈಗ ಒಂಬತ್ತು ವರ್ಷ ವಯಸ್ಸಾಗಿದ್ದು, ಕ್ಯೂಬಿಂಗ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾನೆ ಮತ್ತು ಒಂದು ದಿನ ಒಬ್ಬ ಆಟಗಾರನಾಗಿ ಉತ್ತಮ ಶ್ರೇಣಿಯನ್ನು ಗಳಿಸುವ ಗುರಿಯನ್ನು ಹೊಂದಿದ್ದಾನೆ.

# ಮಧುರೈ ಚಿನ್ನ ಪಿಳ್ಳೈ




*ಶ್ರೀಮಾನ್













*ತಮಿಳುನಾಡಿನಲ್ಲಿ
^ತಮಿಳು ಭಾಷೆಯಲ್ಲಿ 'ಧಾನ್ಯ' ಮತ್ತು 'ಸಮೃದ್ಧಿ' ಎಂಬ ಅರ್ಥ


ಚಿನ್ನ ರವರು ಈ ಕಾರ್ಯಕ್ರಮದ ಬಗ್ಗೆ ಮಹಿಳೆಯರಿಗೆ ಜಾಗೃತಿ ಮೂಡಿಸಿದರು ಹಾಗೂ ಹಳ್ಳಿಯಿಂದ ಹಳ್ಳಿಗೆ ಇದರ ಬಗ್ಗೆ ಪ್ರಚಾರ ಮಾಡಿದರು.
ನಾವು ಇದನ್ನು ಕೆಲವು ವರ್ಷಗಳಿಂದ ಮಾಡುತ್ತಾ ಬಂದಿದ್ದೇವೆ. ನಾವು ಇನ್ನು ಮುಂದೆ ಇತರರನ್ನು ಅವಲಂಬಿಸಬೇಕಾಗಿಲ್ಲ.
ನಾವು ಕೂಡ ಇದನ್ನು ಪ್ರಾರಂಭಿಸಬೇಕು!
ಹೌದು.
ಚಿನ್ನ ರವರ ಅಸಾಧಾರಣ ಕೆಲಸದಿಂದಾಗಿ, ಕಳಂಜಿಯಂನ ಕಾರ್ಯಕಾರಿ ಸಮಿತಿಯ ಸದಸ್ಯರಾದರು.
ನಿಮ್ಮಿಂದಾಗಿ ಅನೇಕ ಮಹಿಳೆಯರು ಈ ಚಳವಳಿಗೆ ಸೇರಿಕೊಂಡಿದ್ದಾರೆ ಮತ್ತು ರಾಜ್ಯಾದ್ಯಂತ ತಮ್ಮ ಗುಂಪುಗಳನ್ನು ರಚಿಸಿಕೊಂಡಿದ್ದಾರೆ.
ದಶಕಗಳು ಕಳೆದಂತೆ, ಈ ಚಳವಳಿಯು ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಪುದುಚೇರಿಯ ನೂರಾರು ಹಳ್ಳಿಗಳಲ್ಲಿ ಹರಡಿದೆ.
ಮೈಕ್ರೋಫೈನಾನ್ಸ್ ಮತ್ತು ಸಮುದಾಯ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಚಿನ್ನ ಪಿಳ್ಳೈ ರವರ ಕೆಲಸಕ್ಕಾಗಿ, 1999 ರಲ್ಲಿ 'ಸ್ತ್ರೀ ಶಕ್ತಿ ಪುರಸ್ಕಾರ' ಪಡೆದವರಲ್ಲಿ ಇವರು ಮೊದಲಿಗರಾದರು.
ಈಕೆಯ ಕಥೆಯಿಂದ ಪುಳಕಿತರಾಗಿ, ಆಗಿನ ಪ್ರಧಾನಿ, ಅಟಲ್ ಬಿಹಾರಿ ವಾಜಪೇಯಿರವರು, ಗೌರವಾರ್ಥವಾಗಿ ಅವರ ಪಾದಗಳನ್ನು ಮುಟ್ಟಿದ್ದರು.
ಇವರು 2019 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಸಹ ಪಡೆದರು.
ತಮಿಳುನಾಡಿನ ಒಂದು ಸಣ್ಣ ಹಳ್ಳಿಯ ಅನಕ್ಷರಸ್ಥ ಕೃಷಿಕರಾದ ಚಿನ್ನ ಪಿಳ್ಳೈ ರವರು, ತಮ್ಮ ಸನ್ನಿವೇಶಗಳು ತಮ್ಮ ಯಶಸ್ಸಿಗೆ ತೊಡಕಗುತ್ತವೆ ಎನ್ನುವ ಎಲ್ಲರಿಗೂ ಸ್ಫೂರ್ತಿಯಾಗಿದ್ದಾರೆ.

# ಮೀರಾ ಶೆಣೈ


ಶ್ರೇಯಸ್, ನೀನು ಬಹಳ ಗಮನಕೊಟ್ಟು ಓದುತ್ತಿರುವುದು ಏನು?
ಸೋನಲ್, ಇದು ಅತ್ಯಂತ ರೋಚಕ ಕಥೆ! ಚಲಿಸುತ್ತಿರುವ ರೈಲಿನಿಂದ ಹೊರಕ್ಕೆ ಎಸೆಯಲ್ಪಟ್ಟು ತನ್ನ ಒಂದು ಕಾಲನ್ನು ಕಳೆದುಕೊಂಡ ಅರುಣಿಮಾ ಸಿನ್ಹಾ ರವರ ಬಗ್ಗೆ...
...ಆದರೂ ಆಕೆ ಮೌಂಟ್ ಎವರೆಸ್ಟ್ ಏರಿದಳು!
ವಿಕಲಾಂಗತೆ ಹೊಂದಿರುವ ಅನೇಕರು ಜೀವನದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿಶೇಷ ಚೇತನರು ತಮ್ಮ ಸಾಮರ್ಥ್ಯವನ್ನು ಅರಿಯಲು ಮೀರಾ ಶೆಣೈ ಅವರುಗಳಿಗೆ ಸಹಾಯ ಮಾಡುತ್ತಾರೆ.
ಮೀರಾ ಶೆಣೈ ಬೆಳೆದು ದೊಡ್ಡವಳಾಗುತ್ತಿರುವಾಗ, ಅವಳಿಗೆ ಇಬ್ಬರು ವ್ಯಕ್ತಿಗಳು ಸ್ಫೂರ್ತಿ ನೀಡಿದ್ದರು. ಅವಳ ಅಜ್ಜ...
ಮೀರಾ ನೆನಪಿರಲಿ, ನೀನು ಗಳಿಸಿದ ಹಣದ ಶೇಕಡಾ ಹತ್ತರಷ್ಟನ್ನು ನೆರವಿನ ಅಗತ್ಯವಿರುವವರಿಗೆ ನೀಡಬೇಕು...
...ಉದಾರ ವ್ಯಕ್ತಿತ್ವತ ಸಜ್ಜನರಾಗಿದ್ದರು...
...ಮತ್ತು ಸ್ಟಾಕ್ ಮಾರ್ಕೆಟ್ಟಿನಲ್ಲಿ ವಹಿವಾಟು ಮಾಡಲು ತಿಳಿದಿದ್ದ ಇವಳ ತಾಯಿ, ತನಗೆ ಪಿತ್ರಾರ್ಜಿತವಾಗಿ ಬಂದಿದ್ದ ಸಣ್ಣ ಸ್ವತ್ತನ್ನು ತನ್ನ ಹೆಣ್ಣುಮಕ್ಕಳ ಭವಿಷ್ಯಕ್ಕೆ ಸಹಾಯವಾಗಬಹುದಾದ ಸಂಪತ್ತಾಗಿ ಪರಿವರ್ತಿಸಿದ್ದರು.
ನಾನು ಮದುವೆಯಾದ ನಂತರ ಮೆಡಿಸಿನ್ ಓದುವ ಅವಕಾಶದಿಂದ ವಂಚಿತಳಾದೆನು. ಆದರೆ ನೀವು ಏನಾಗಲು ಬಯಸಿವಿರೋ ಅದನ್ನೇ ಮಾಡಬೇಕು.


ಮೀರಾ ಬೆಳೆದು ದೊಡ್ಡವಳಾದಾಗ, ತನ್ನ ಆಸಕ್ತಿಯು ಬಡ ಗ್ರಾಮೀಣ ಯುವಕರನ್ನು ಭಾರತದ ಆತ್ಮವಿಶ್ವಾಸಭರಿತ ನಾಗರಿಕರನ್ನಾಗಿ ಪರಿವರ್ತಿಸುವಲ್ಲಿ ಅಡಗಿದೆ ಎಂಬುದನ್ನು ಅರಿತುಕೊಂಡಳು.
ರೈತನಾಗುವುದರಲ್ಲಿ ತಪ್ಪೇನು? ನಾನು ಒಬ್ಬ ರೈತ, ನಿಮ್ಮ ಅಜ್ಜ ಕೂಡ ಒಬ್ಬ ರೈತನಾಗಿದ್ದನು...
ಖಂಡಿತಾ! ಹೀಗಾಗಿಯೇ ನಾವು ಇನ್ನೂ ಬಡವರಾಗಿಯೇ ಇದ್ದೇವೆ.
ಅವರು ಹಳ್ಳಿಗಳಲ್ಲಿ ಬಡತನ ಮತ್ತು ಹಸಿವನ್ನು ನೋಡುತ್ತಾರೆ, ಆದರೆ ಚಲನಚಿತ್ರಗಳಲ್ಲಿ ನಗರದ ಯುವಕರನ್ನು ಮೋಟಾರುಬೈಕು ಮತ್ತು ಬಣ್ಣಬಣ್ಣದ ಬಟ್ಟೆಗಳೊಂದಿಗೆ ತೋರಿಸಲಾಗುತ್ತದೆ. ಅಂಥವರಿಗೆ ಮಾರ್ಗದರ್ಶನ ನೀಡಬೇಕಾಗಿದೆ, ಇಲ್ಲದಿದ್ದರೆ ಅವರು ತಪ್ಪು ಆಯ್ಕೆಗಳನ್ನು ಮಾಡಬಹುದು.
ಮೀರಾ ರವರು 2005 ರಲ್ಲಿ ಆಂಧ್ರಪ್ರದೇಶ ಸರ್ಕಾರಕ್ಕಾಗಿ ಭಾರತದ ಮೊದಲ ಕೌಶಲ್ಯ ಮಿಷನ್ ಅನ್ನು ಸ್ಥಾಪಿಸಿದರು. ಇದನ್ನು ಎಂಪ್ಲಾಯ್ಮೆಂಟ್ ಜನರೇಷನ್ ಅಂಡ್ ಮಾರ್ಕೆಟಿಂಗ್ ಮಿಷನ್ (ಇ.ಜಿ.ಎಮ್.ಎಮ್) ಎಂದು ಕರೆಯಲಾಯಿತು.
ಮೀರಾ ಕಷ್ಟಗಳನ್ನು ಎದುರಿಸಿದರು ಆದರೆ ಬಹಳ ಕಷ್ಟಪಟ್ಟು ಕೆಲಸ ಮಾಡಿದರು ಮತ್ತು ಇ.ಜಿ.ಎಮ್.ಎಮ್ ಒಂದು ದೊಡ್ಡ ಯಶಸ್ಸನ್ನು ಕಂಡಿತು. ನಂತರ, ಒಂದು ದಿನ-
ಈ ವರದಿಯು ಪ್ರಪಂಚದ ಶೇ. 80 ರಷ್ಟು ವಿಶೇಷಚೇತನ ಯುವಕರು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿದ್ದಾರೆ ಎಂದು ಹೇಳುತ್ತದೆ.
ನಮಗೆ ಬೇಕಿರುವುದು ವಿಶೇಷಚೇತನ ಯುವಕರಿಗೆ ಉದ್ಯೋಗ ಪಡೆಯಲು ಸಹಾಯ ಮಾಡು ಉತ್ತಮ ಕಾರ್ಯಕ್ರಮ. ಸುಬೋಧ್, ನಿಮ್ಮ ಅಭಿಪ್ರಾಯವೇನು?
ಇದೊಂದು ಅದ್ಭುತ ಚಿಂತನೆ.
ಮೀರಾ ರವರ ಪತಿ, ಡಾ. ಸುಬೋಧ ಶೆಣೈ, ಒಬ್ಬ ಸುಪ್ರಸಿದ್ಧ ಭೌತಶಾಸ್ತ್ರಜ್ಞರು.
ಅಂಗವೈಕಲ್ಯ ಹೊಂದಿರುವ ಯಶಸ್ವಿ ವ್ಯಕ್ತಿಗಳನ್ನು ನಾನು ಮೊದಲು ಭೇಟಿಯಾಗಬೇಕು.
ವಿಶೇಷಚೇತನ ವ್ಯಕ್ತಿಯನ್ನು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಯಾವುದು ಪ್ರೇರೇಪಿಸುತ್ತದೆ ಎಂಬುದರ ಕುರಿತು ಮೀರಾ ಬಹಳಷ್ಟು ಕಲಿತರು. ಇದು 'ಯೂ ಕ್ಯಾನ್' ಎಂಬ ಸ್ಫೂರ್ತಿದಾಯಕ ಪುಸ್ತಕವಾಯಿತು.




*ಕಿವುಡ
**ಕೃತಕ ಬುದ್ಧಿಮತ್ತೆ
ˆಕುಂಟ

# ರಿಂಗ್‌ಫಾಮಿ ಯಂಗ್




*ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರೀಸರ್ಚ್ (ಸಿ.ಎಸ್.ಐ.ಆರ್) ಮತ್ತು ಇನ್ಸ್‌ಟಿಟ್ಯೂಟ್ ಆಫ್ ಹಿಮಾಲಯನ್ ಬಯೋಸೋರ್ಸ್ ಟೆಕ್ನಾಲಜಿ (ಐ.ಎಚ್.ಬಿ.ಟಿ) ಸಂಸ್ಥೆಗಳ ಒಂದು ಜಂಟಿ ಕಾರ್ಯಕ್ರಮ


ಹೌದು, ಆದರೆ ಈಗ ಸೇಬುಗಳಲ್ಲಿ ಹಲವು ವಿಧಗಳಿವೆ.
ಸಾಂಪ್ರದಾಯಿಕ ಶೀತದ ತಾಪಮಾನದ ಅಗತ್ಯವಿಲ್ಲದ 'ಕಡಿಮೆ ಚಳಿ(ಲೋ ಚಿಲ್)' ವಿಧದ ಸೇಬು ಇದ್ದು ಅದರ ಬಗ್ಗೆ ನಾವು ನಿಮಗೆ ಹೇಳಲಿದ್ದೇವೆ.
ಆದರೂ ಅವುಗಳು ಬೆಳೆಯುತ್ತವೆ ಎಂಬುದಕ್ಕೆ ಇನ್ನೂ ಯಾವುದೇ ಖಾತರಿ ಇಲ್ಲ. ಇಂತಹ ಅಪಾಯವನ್ನು ಯಾರು ತೆಗೆದುಕೊಳ್ಳಲಿದ್ದಾರೆ?
ಅನೇಕ ಜನರಿಗೆ ಇದು ಮನವರಿಕೆಯಾಗಲಿಲ್ಲ, ಆದರೆ ರಿಂಗ್‌ಫಾಮಿ ರವರು ಇಂತಹ ಸೇಬುಗಳ ಬಗ್ಗೆ ಎಲ್ಲಾ ಮಾಹಿತಿ ತಿಳಿಕಂಡುಕೊಂಡರು.
ಮುಂದಿನ ವರ್ಷದ ಆರಂಭದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಆರಂಭವಾಯಿತು.
ನಾವು ಈಗ ಮನೆಯಲ್ಲಿಯೇ ಇರಬೇಕಾಗಿರುವುದರಿಂದ, ಕಡಿಮೆ ಚಳಿ ತಳಿಯ ಸೇಬುಗಳನ್ನು ಬೆಳೆಯಲು ಪ್ರಯತ್ನಿಸೋಣ.
ಹೌದು. ಪ್ರಯೋಗ ಮಾಡಲು ಇದೊಂದು ಉತ್ತಮ ಸಮಯವಾಗಿದೆ.
ಸರ್ಕಾರದ ಬೆಂಬಲದೊಂದಿಗೆ ರಿಂಗ್‌ಫಾಮಿ ಮತ್ತು ಕೆಲವರು ಅನ್ನಾ, ಡಾರ್ಸೆಟ್ ಗೋಲ್ಡನ್ ಮತ್ತು ಇತರ ಕಡಿಮೆ ಚಳಿಯ ತಳಿ ಗಿಡಗಳನ್ನು ನೆಡುತ್ತಾರೆ.
ಈ ಗಿಡಗಳಿಗೆ ಸಾಕಷ್ಟು ಪೋಷಣೆಯ ಅಗತ್ಯವಿದೆ.
ಸರಿ, ಪೋಷಣೆ ಮಾಡಲು ನಮಗೆ ಸಾಕಷ್ಟು ಸಮಯವಿದೆ.
ದಂಪತಿಗಳು ಗಿಡಗಳಿಗೆ ಬೇಕಾದ ಆರೈಕೆಯನ್ನು ನೀಡಿದರು. ಗಿಡಗಳು ಬೆಳೆಯಲಾರಂಭಿಸಿದವು...
ನಾನು 90 ಸಸಿಗಳನ್ನು ನೆಟ್ಟಿದ್ದೆ, ಈಗ 85 ಉಳಿದಿವೆ.


...ಮತ್ತು ಹೂ ಬಿಡುತ್ತಿವೆ. 2021 ರಲ್ಲಿ-
ಸೇಬುಗಳು! ಇಷ್ಟೊಂದು!


ಮೊದಲ ವರ್ಷದ ಬೆಳೆಯಲ್ಲಿಯೇ ಅವರು ಸುಮಾರು 200 ಕೆಜಿ ಸೇಬುಗಳನ್ನು ಬೆಳೆದರು!
ಅದೂ ಸಹ ಹಿಂದೆದೂ ಸೇಬು ಬೆಳೆಯದ ಪ್ರದೇಶದಲ್ಲಿ!
ಇದು ಒಂದು ಪವಾಡ!
ಇದನ್ನು ಸಂಭ್ರಮಿಸಲು, ರಿಂಗ್‌ಫಾಮಿ ತಾವು ಬೆಳೆದ ಹೆಚ್ಚಿನ ಸೇಬುಗಳನ್ನು ತಮ್ಮ ಸ್ನೇಹಿತರಿಗೆ ಮತ್ತು ಕುಟುಂಬದವರಿಗೆ ಹಂಚಿದರು.


ರಿಂಗ್‌ಫಾಮಿ ಅವರನ್ನು ಮನ್ ಕಿ ಬಾತ್‌ನಲ್ಲಿ ಉಲ್ಲೇಖಿಸಲಾಯಿತು ಮತ್ತು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ರವರು ಶ್ಲಾಘಿಸಿದರು.
ಈ ಆರೋಗ್ಯಕರ ಬೆಳೆಯನ್ನು ನೋಡಿದಾಗ ನನಗೆ ತುಂಬಾ ಸಂತೋಷವಾಗುತ್ತದೆ. ನೀವು ಶ್ರಮ ವಹಿಸಿದ್ದೀರಿ, ಮತ್ತು ನಿಮ್ಮ ಕಠಿಣ ಪರಿಶ್ರಮವು ನಮ್ಮ ತೋಟಗಾರಿಕೆ ವಲಯದ ಬಗ್ಗೆ ನನಗೆ ಹೆಚ್ಚಿನ ಭರವಸೆಯನ್ನು ನೀಡಿದೆ.
ಅವರು ಹಣದ ಪ್ರತಿಫಲವನ್ನೂ ಪಡೆದರು.


ಈ ಹಣದಿಂದ, ನಾವು ನಮ್ಮ ಸೇಬು ತೋಟವನ್ನು ವಿಸ್ತರಿಸಬಹುದು.
ಉಖ್ರುಲ್‌ನಲ್ಲಿ ನಮಗೆ ಕೋಲ್ಡ್ ಸ್ಟೋರೇಜ್ ಮತ್ತು ಆಹಾರ ಸಂಸ್ಕರಣಾ ಸೌಲಭ್ಯಗಳು ಸಹ ಬೇಕಾಗುತ್ತವೆ. ಇದರಿಂದ ನಮಗೆ ಮತ್ತು ಇತರ ರೈತರಿಗೆ ಸಹಾಯವಾಗುತ್ತದೆ. ನಮ್ಮ ಉತ್ಪನ್ನಗಳನ್ನು ಹೆಚ್ಚಿನ ಶೆಲ್ಫ್ ಲೈಫ್ ಹೊಂದಿರುತ್ತವೆ ಮತ್ತು ಮಾರುಕಟ್ಟೆಯನ್ನು ತಲುಪಲು ಸಾಧ್ಯವಾಗುತ್ತದೆ.
ರಿಂಗ್‌ಫಾಮಿ ಈಗ ಇತರ ರೈತರಿಗೆ ಸೇಬು ಕೃಷಿಯಲ್ಲಿ ತರಬೇತಿ ನೀಡಲು ಹೊರಟಿದ್ದು, ಇದರಿಂದ ಮಣಿಪುರವು ತನ್ನದೇ ನೆಲದಲ್ಲಿ ಬೆಳೆದ ಸೇಬುಗಳ ಬಗ್ಗೆ ಹೆಮ್ಮೆಪಡುತ್ತದೆ.

# ಶ್ರೀಧರ್ ವೆಂಬು




*ತಂದೆ

ˆಯು.ಎಸ್.ಎ.ಯ ನ್ಯೂಜೆರ್ಸಿಯ ಪ್ರತಿಷ್ಠಿತ ವಿಶ್ವವಿದ್ಯಾನಿಲಯ


ಶ್ರೀಧರ್ ರವರು ಉದ್ಯಮಶೀಲತೆಯ ಮನೋಭಾವವನ್ನು ಸಹ ಬೆಳೆಸಿಕೊಂಡರು. 1996 ರಲ್ಲಿ-
ನಾವು ಎಷ್ಟು ದಿನ ಬೇರೆಯವರಿಗಾಗಿ ಕೆಲಸ ಮಾಡುತ್ತಿರುವುದು? ನಮ್ಮ ಸ್ವಂತ ಕಂಪನಿಯನ್ನು ಏಕೆ ಪ್ರಾರಂಭಿಸಬಾರದು?
ಸಹೋದರರಾದ ನಾವು ವ್ಯವಹಾರ ಪಾಲುದಾರರಾಗುತ್ತೇವೆ!
ಒಟ್ಟಿಗೆ, ಅವರು ಅಡ್ವೆಂಟ್‌ನೆಟ್ ಎಂಬ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಹೌಸ್ ಅನ್ನು ಪ್ರಾರಂಭಿಸಿದರು
ಶ್ರೀಧರ್ ಮತ್ತು ಅವರ ಕುಟುಂಬ ಜೀವನವು ಉತ್ತಮವಾಗಿ ಸಾಗುತ್ತಿತ್ತು.
ನಾಲ್ಕು ವರ್ಷಗಳಲ್ಲಿ ನಮ್ಮ ಕಂಪನಿಯ ಆದಾಯವು ಹತ್ತು ಮಿಲಿಯನ್ ಡಾಲರ್‌ಗಳನ್ನು ಮೀರಿದೆ!
ಈಗ ನಮ್ಮನ್ನು ತಡೆಯಲು ಸಾಧ್ಯವಿಲ್ಲ!
2009 ರಲ್ಲಿ ಕಂಪನಿಯು ಝೋಹೋ ಕಾರ್ಪೊರೇಷನ್ ಎಂದು ಮರುನಾಮಕರಣಗೊಂಡಿತು. ಮುಂದಿನ ದಶಕದಲ್ಲಿ, ಇದು ಯು.ಎಸ್.ಎ.ಯಲ್ಲಿ ಮತ್ತು ಪ್ರಪಂಚದಾದ್ಯಂತ ಪ್ರತಿಷ್ಠಿತ ಟೆಕ್ ಕಂಪನಿಯಾಗಿ ಮಾರ್ಪಟ್ಟಿತು.
ಆದರೂ, ವೆಂಬುರವರ ಮನಸ್ಸಿನಲ್ಲಿ ವ್ಯಾಪಾರ ಮತ್ತು ಲಾಭಕ್ಕಿಂತ ಹೆಚ್ಚು ಮುಖ್ಯವಾದ ವಿಷಯಗಳಿದ್ದವು.
ನನ್ನ ದೇಶಕ್ಕೆ ನಾನು ಸಹಾಯ ಮಾಡಲು ಸಾಧ್ಯವಾಗದಿದ್ದರೆ ಈ ಎಲ್ಲಾ ಯಶಸ್ಸುಗಳಿಗೆ ಅರ್ಥವಿರುವುದಿಲ್ಲ. ನಾನು ಮರಳಿ ಹೋಗಬೇಕು. ಉದ್ಯೋಗ ಸೃಷ್ಟಿಸಲು ಮತ್ತು ಸಾಫ್ಟ್‌ವೇರ್ ವಲಯದಲ್ಲಿ ಭಾರತವನ್ನು ಸ್ವಾವಲಂಬಿ ದೇಶವನ್ನಾಗಿಸಲು ಸಹಾಯ ಮಾಡಲು ನನ್ನ ಸಂಪನ್ಮೂಲಗಳನ್ನು ನಾನು ಬಳಸಬೇಕು.
ಕೆಲವೇ ದಿನಗಳಲ್ಲಿ-
ನಾವು ಭಾರತಕ್ಕೆ ಹಿಂತಿರುಗಬೇಕೆಂದು ನಾನು ಬಯಸುತ್ತೇನೆ. ತಮಿಳುನಾಡಿನ ಮಾತಲಂಪರೈ ಗ್ರಾಮದಲ್ಲಿ ನಮ್ಮ ಆಫೀಸುಗಳನ್ನು ತೆರೆಯಲು ನಾನು ಬಯಸುತ್ತೇನೆ.
ಭಾರತಕ್ಕೆ ಹಿಂತಿರುಗಿ ಹೋಗುವ ಯೋಜನೆ ನನಗೆ ಇಷ್ಟವಾಯಿತು.
ಆದರೆ ನಾವು ನಮ್ಮ ಕೆಲಸಗಳನ್ನು ಹಳ್ಳಿಯಿಂದ ನಡೆಸುವುದು ಹೇಗೆ?
ದೊಡ್ಡ ನಗರಗಳು ಕಿಕ್ಕಿರಿದು ತುಂಬಿವೆ ಮತ್ತು ಕಲುಷಿತಗೊಂಡಿವೆ, ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರತಿಭೆಗಳಿವೆ. ನಾವು ಭಾರತದ ಪ್ರತಿಯೊಂದು ಭಾಗಕ್ಕೂ ಅವಕಾಶಗಳನ್ನು ತರಬೇಕು.




*30,000 ಕೋಟಿಗೂ ಹೆಚ್ಚು

# ವೇದಾಂಗಿ ಕುಲಕರ್ಣಿ


ನಿಮ್ಮಲ್ಲಿ ಎಷ್ಟು ಮಂದಿ ಪ್ರತಿ ದಿನ ಶಾಲೆಗೆ ಸೈಕಲ್ಲಿನಲ್ಲಿ ಹೋಗುತ್ತೀರಿ?
ನಾನು ಹೋಗುತ್ತೇನೆ ಸರ್.
ನಾನೂ ಕೂಡ.
ನಾನು ಕೂಡ ಹೋಗುತ್ತೇನೆ.
ಇಂದು ನಾನು ನಿಮಗೆ ಹೇಳಲು ಹೊರಟಿರುವುದು ವೇದಾಂಗಿ ಕುಲಕರ್ಣಿ ಎಂಬ ಯುವತಿಯ ಬಗ್ಗೆ. ಇವರು ಸೈಕಲ್ಲಿನಲ್ಲಿ ಪ್ರಪಂಚವನ್ನು ಸುತ್ತಿದ ಅತ್ಯಂತ ಕಿರಿಯ ಮಹಿಳೆಯಾಗಿದ್ದಾರೆ.
ವೇದಾಂಗಿ ಕುಲಕರ್ಣಿ ಸಾಹಸಮಯ ವಾತಾವರಣದಲ್ಲಿ ಬೆಳೆದವಳು. ದೊಡ್ಡವಳಾಗುತ್ತಿರುವಾಗ, ಅವಳು ಒಳಗೆ ಎಷ್ಟು ಸಮಯವನ್ನು ಕಳೆಯುತ್ತಿದ್ದಳೋ ಅಷ್ಟೇ ಸಮಯವನ್ನು ಹೊರಗೆ ಕಳೆಯುತ್ತಿದ್ದಳು.
ವಾವ್, ಅದು ಉತ್ತಮವಾದ ದೂರದ ನಡೆಗೆಯಾಗಿತ್ತು.
ವಿಹಂಗ ನೋಟ, ತುಂಬಾ ಸುಂದರವಾಗಿದೆ!
17ನೇ ವಯಸ್ಸಿನಲ್ಲಿ, ವೇದಾಂಗಿ ತನ್ನ ಪೋಷಕರ ಬೆಂಬಲದೊಂದಿಗೆ ಹಿಮಾಲಯದಾದ್ಯಂತ ಸೈಕಲ್ಲಿನಲ್ಲಿ ಹೋಗಲು ನಿರ್ಧರಿಸಿದಳು.
ಬ್ರೋಷರ್‌ಗಳ ಪ್ರಕಾರ, ಯಾವುದೇ ಪ್ರವಾಸಗಳಿಗೆ ಸೇರಲು ಅವಳು ತುಂಬಾ ಚಿಕ್ಕವಳಾಗಿದ್ದಳು.
ನಾವು ಕಾರಿನಲ್ಲಿ ಹಿಂಬಾಲಿಸುತ್ತೇವೆ. ಇದು ಸುರಕ್ಷಿತ, ಜೊತೆಗೆ ಅವಳು ಸಹ ಸ್ವತಂತ್ರಳು ಎಂದು ಭಾವಿಸುತ್ತಾಳೆ.
ಎರಡೂವರೆ ವಾರಗಳು ಮತ್ತು 767 ಕಿಲೋಮೀಟರುಗಳ ನಂತರ, ವೇದಾಂಗಿ ಮನಾಲಿಯಿಂದ ಶ್ರೀನಗರಕ್ಕೆ ಸೈಕ್ಲಿಂಗ್ ಮಾಡಿದಳು.
ಹಾಂ, ನಾನು ಮುಂದೆ ಎಲ್ಲಿಗೆ ಹೋಗಬೇಕು?


ಶಾಲೆಯನ್ನು ಮುಗಿಸಿದ ನಂತರ, ಅವಳು ಕ್ರೀಡಾ ನಿರ್ವಹಣೆ ಕೋರ್ಸನ್ನು ಅಧ್ಯಯನ ಮಾಡಲು ಇಂಗ್ಲೆಂಡಿಗೆ ತೆರಳಿದರು. ಜನ, ಸ್ಥಳ, ಸಂಸ್ಕೃತಿ- ಇವೆಲ್ಲವೂ ಭಿನ್ನವಾಗಿತ್ತು ಮತ್ತು ದಿಗ್ಭ್ರಮೆಗೊಳಿಸುವಂತಿತ್ತು.
ನನಗೆ ಇಲ್ಲಿ ಸ್ನೇಹಿತರನ್ನು ಸಿಗುತ್ತಾರೆಯೇ? ನಾನು ಇಲ್ಲಿಗೆ ಹೇಗೆ ಹೊಂದಿಕೊಳ್ಳುವುದು?
ಅವಳಲ್ಲಿ ನಿರಂತರವಾಗಿ ಆಳವಾಗಿದ್ದ ಒಂದು ವಿಷಯವೆಂದರೆ ಹೊರಾಂಗಣದತ್ತ ಅವಳ ಪ್ರೀತಿ.
ವೇದಾಂಗಿಯು ತೆರೆದ ಆಕಾಶದಡಿ ಸೈಕಲ್ ತುಳಿಯುತ್ತಿದ್ದಂತೆ, ಅವಳ ಚಿಂತೆಗಳು ಕರಗಿ ಹೋಗುತ್ತಿದ್ದವು. ಅವಳು ಸ್ವತಂತ್ರಳಾಗಿದ್ದಳು.
ನಾನು ಪ್ರಪಂಚದಾದ್ಯಂತ ಸೈಕ್ಲಿಂಗ್ ಮಾಡಲು ಬಯಸುತ್ತೇನೆ ಮತ್ತು ನಾನು ವೇಗವಾಗಿ ತಲುಪಿದ ದಾಖಲೆಯನ್ನು ಮುರಿಯಬಹುದೇ ಎಂದು ನೋಡಲು ಬಯಸುತ್ತೇನೆ.
ವೇದಾಂಗಿಯ ನಿರ್ಧಾರವು ಅವಳ ಜೀವನವನ್ನು ಬದಲಾಯಿಸುವಂತಿತ್ತು.
ಇನ್ನೂ ಕಾಲೇಜಿನ ಕೆಲಸಗಳಲ್ಲಿಯೇ ಪರದಾಡುತ್ತಿರುವಾಗ, ಹಿಂದಿಗಿಂತಲೂ ಹೆಚ್ಚು ಕಠಿಣ ತರಬೇತಿಯನ್ನು ಪ್ರಾರಂಭಿಸಿದಳು.
ಯಶಸ್ವಿಯಾಗಲು ನಾನು ದೈಹಿಕ ಮತ್ತು ಮಾನಸಿಕವಾಗಿ ಸದೃಢಳಾಗಬೇಕು.
ಸಾಗಬೇಕಾಗಿರುವ ಮಾರ್ಗಗಳನ್ನು ಗುರುತು ಮಾಡಿಕೊಳ್ಳಲಾಯಿತು, ಕಾಗದಪತ್ರದಗಳನ್ನು ಸಿದ್ಧಪಡಿಸಿಕೊಳ್ಳಲಾಯಿತು ಮತ್ತು ಪ್ರಯಾಣಕ್ಕಾಗಿ ಹೊಸ ಸೈಕಲನ್ನು ತಯಾರಿ ಮಾಡಿಕೊಳ್ಳಲಾಯಿತು.
ಇದು ಅದ್ಭುತವಾಗಿದೆ! ನಾನು ಇವನಿಗೆ ಕ್ಯಾಪುಚಿನೊ ಎಂದು ಹೆಸರಿಡುತ್ತೇನೆ.
2018 ರ ಜುಲೈ 17 ರಂದು ವೇದಾಂಗಿ ತನ್ನ ಪ್ರಯಾಣ ಪ್ರಾರಂಭಿಸಿದಳು.
ಆಸ್ಟ್ರೇಲಿಯಾದಿಂದ ಪ್ರಾರಂಭಿಸಿ, ಆಕೆ 14 ದೇಶಗಳ ಮೂಲಕ ಸಾಗಿದಳು.


ಕೆನಡಾದಲ್ಲಿ ಗ್ರಿಜ್ಲಿ ಕರಡಿಯಿಂದ ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡು...
... ಮತ್ತು ಸ್ಪೇನ್‌ನ ನೈಫ್‌ಪಾಯಿಂಟ್‌ನಲ್ಲಿ ದರೋಡೆಗೆ ಒಳಗಾಗಿ...
...ರಷ್ಯಾದಲ್ಲಿ ಘನೀಕರಿಸುತ್ತಿದ್ದ ಹಿಮದಲ್ಲಿ ಕ್ಯಾಂಪಿಂಗ್ ಮಾಡಿ...
...ಇದು ಸುಲಭವಾದ ಪಯಾಣವಾಗಿರಲಿಲ್ಲ.
ಆದರೆ, ಹಲವು ರೀತಿಯಲ್ಲಿ, ಇದು ಲಾಭದಾಯಕವಾಗಿತ್ತು. ಅವಳು ಹೊಸ ಸ್ನೇಹಿತರನ್ನು ಮಾಡಿಕೊಂಡಳು ...
...ಅವಳ ಸಾಮರ್ಥ್ಯಗಳ ಬಗ್ಗೆ ವಿಶ್ವಾಸ ಬೆಳೆಯಿತು...
...ಮತ್ತು ಅವಳ ಈ ಪ್ರಯಾಣದ ಮಧ್ಯದಲ್ಲಿ ತನ್ನ 20ನೇ ಜನ್ಮದಿನವನ್ನು ಆಚರಿಸಿಕೊಂಡಳು.
24 ಡಿಸೆಂಬರ್, 2018 ರಂದು, ವೇದಾಂಗಿ ಆಸ್ಟ್ರೇಲಿಯದಲ್ಲಿ ತನ್ನ ಅಂತಿಮ ಗುರಿಯನ್ನು ತಲುಪಿದರು.
29,000 ಕಿಲೋಮೀಟರುಗಳು. ಓಹೋ, ನಾನು ಪೂರ್ಣಗೊಳಿಸಿದೆನು!
ಈ ಗುರಿಯನ್ನು ಮುಟ್ಟಿದ ವೇಗದ ಮಹಿಳೆಯಾಗಬೇಕು ಎಂದುಕೊಂಡಿದ್ದಳು, ಅದು ಸಾಧ್ಯವಾಗಲಿಲ್ಲ, ಆದರೆ ಗುರಿಮುಟ್ಟಿದ್ದವರಲ್ಲಿ ಇವಳು ಅತ್ಯಂತ ಕಿರಿಯವಳಾದಳು.
2023 ರಲ್ಲಿ, ವೇದಾಂಗಿ ಲೇಹ್-ಮನಾಲಿ ಹೆದ್ದಾರಿಯಲ್ಲಿ ಅತ್ಯಂತ ವೇಗವಾಗಿ ಸೈಕಲ್ ತುಳಿದ ಮಹಿಳೆಯಾದಳು. ಅವಳು ಈಗ ತನ್ನ ಅನುಭವಗಳ ಬಗ್ಗೆ ಮಾತನಾಡುತ್ತಾಳೆ.
ಸೈಕ್ಲಿಂಗ್ ನನಗೆ ಸಹಿಷ್ಣುತೆ ಒಂದು ಮನಃಸ್ಥಿತಿ ಎಂಬುದನ್ನು ಕಲಿಸಿದೆ.
ಇತರ ಜನರು ತಮ್ಮದೇ ಆದ ಸಾಹಸಗಳನ್ನು ಮಾಡುವಂತೆ ಸಹಾಯ ಮಾಡಲು ಈಕೆ 'ದಿ ಅಡ್ವೆಂಚರ್ ಶೆಡ್' ಎಂಬ ಎಕ್ಸ್ಪೆಡಿಶನ್ ಮ್ಯಾನೇಜ್‌ಮೆಂಟ್ ಕಂಪನಿಯನ್ನು ಪ್ರಾರಂಭಿಸಿದಳು.



# ಮನ್ ಕಿ ಬಾತ್

## ಸಂಪುಟ 9

ಮನಸ್ಸಿದ್ದರೆ ಮಾರ್ಗ. ಮನಸಿಟ್ಟು ಮಾಡಿದರೆ ಯಾವ ಕೆಲಸವೂ ಅಸಾಧ್ಯವಲ್ಲ. ಅಸಾಮರ್ಥ್ಯಗಳು, ಬಡತನ, ಶಿಕ್ಷಣ ಅಥವಾ ಸಂಪನ್ಮೂಲಗಳ ಕೊರತೆ ಇರಲಿ, ಜನರು ತಮಗೆ ತಾವು ಸಹಾಯ ಮಾಡಿಕೊಳ್ಳಲು ಮತ್ತು ಇತರರು ತಮ್ಮ ಗುರಿಗಳನ್ನು ಸಾಧಿಸಲು ಸಹಾಯ ಮಾಡಲು ದೊಡ್ಡ ಅಡೆತಡೆಗಳನ್ನು ಮೀರಿ ಕೆಲಸ ಮಾಡಿದ್ದಾರೆ.

ಮನ್ ಕಿ ಬಾತ್‌ನ ಒಂಬತ್ತನೇ ಸಂಪುಟವು ಜನರು ತಾವು ಎದುರಿಸಿದ ಸವಾಲುಗಳನ್ನು ದಿಟ್ಟತನ ಮತ್ತು ದೃಢಸಂಕಲ್ಪದಿಂದ ಹಿಮ್ಮೆಟ್ಟಿ ನಿಂತು ಹೇಗೆ ಕೆಲಸ ಮಾಡಿದರು ಎಂಬುದನ್ನು ಹೇಳುತ್ತದೆ.

20ನೇ ವಯಸ್ಸಿನಲ್ಲಿ ಜಗತ್ತಿನಾದ್ಯಂತ ವೇಗವಾಗಿ ಸೈಕಲ್ ತುಳಿಯುವ ಮಹಿಳೆ ಎನಿಸಿಕೊಂಡ ವೇದಾಂಗಿ ಕುಲಕರ್ಣಿಯಿಂದ, ಸೇಬು ಬೆಳೆಯಲು ಸಾಧ್ಯವೇ ಇಲ್ಲ ಎಂಬಂತಹ ಪ್ರದೇಶದಲ್ಲಿ ಬೆಳೆದು ಸಾಧಿಸಿದ ರಿಂಗ್‌ಫಾಮಿ ಮತ್ತು ಏಂಜೆಲ್ ಯಂಗ್, ಸಮುದಾಯ ಬ್ಯಾಂಕಿಂಗ್ ಗುಂಪನ್ನು ಪ್ರಾರಂಭಿಸಿ ಗ್ರಾಮೀಣ ಮಹಿಳೆಯರಿಗೆ ಆರ್ಥಿಕವಾಗಿ ಸ್ವತಂತ್ರರಾಗಲು ಸಹಾಯ ಮಾಡಿದ ಮಧುರೈ ಚಿನ್ನ ಪಿಳ್ಳೈರವರ ವರೆಗಿನ ಈ ಕಥೆಗಳು ಇಚ್ಛಾಶಕ್ತಿಯನ್ನು ಹೊಂದಿದ್ದರೆ ಏನನ್ನೂ ಬೇಕಾದರೂ ಮಾಡಲು ಸಾಧ್ಯ ಎಂಬುದಕ್ಕೆ ಪುರಾವೆಯಾಗಿವೆ.



₹99

www.amarchitrakatha.com
ISBN 978-93-6127-331-5